ಸಾಕ್ಷಿಯನ್ನು ದಿಃ **01.10.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ವಿ.ಜಿ.ಎಂ.ವಕೀಲರಿಂದಃ-

ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಹೆಸರು ವೆಂಕಟೇಶ್. ನನ್ನ ತಂದೆಯದು ದಲ್ಲಾಳು ಗ್ರಾಮವಾಗಿದೆ. ನನ್ನ ಸೋದರ ಮಾವಂದಿರು ನನ್ನ ತಾಯಿಯ ಮೇಲೆ ಈ ಪ್ರಕರಣವನ್ನು ಹೂಡಿದ್ದಾರೆ ಎಂದು ಈ ಪ್ರಕರಣದ ವಿಚಾರವನ್ನು ತಿಳಿದುಕೊಂಡಿದ್ದೇನೆ. ಈ ದಾವೆಯಲ್ಲಿ ನನ್ನ ಮಾವಂದಿರು ನನ್ನ ತಾಯಿಗೆ ಜಮೀನು ಕೊಡಲ್ಲ ಎಂದು ಹಾಕಿದ್ದಾರೆ. ಈ ದಾವೆಯಲ್ಲಿ ಸರ್ವೆ.ನಂ. 125, 126, 127,128, 4 ಮತ್ತು 279 ರ ಸ್ವತ್ತುಗಳು ಸೇರಿವೆ ಎಂದು ನನಗೆ ತಿಳಿದಿದ್ದು, ಬೇರೆ ಆಸ್ತಿಗಳ ಸರ್ವೆ ನಂ. ನನಗೆ ಗೊತ್ತಿಲ್ಲ, ನನ್ನ ತಾಯಿ ಈ ದಾವೆಯಲ್ಲಿ ಬಂದಿದ್ದರು ಅವರಿಗೆ ಹುಷಾರಿಲ್ಲದ ಕಾರಣ ಈಗ ನಾನು ಬಂದಿದ್ದೇನೆ ಎನ್ನುತ್ತಾರೆ. ಈಗ ಮೇಲೆ ಹೇಳಿದಂತಹ ಸರ್ವೆ ನಂಬರ್ ಜಮೀನುಗಳಲ್ಲಿ ಎಷ್ಟು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳ ಚೆಕ್ಕುಬಂದಿ ನನಗೆ ಜ್ಞಾಪಕವಿಲ್ಲ. ನಾನು ದಲ್ಲಾಳು ಗ್ರಾಮದಲ್ಲಿ ವಾಸವಿಲ್ಲ, ಒಡೆಯರಹೊಸಹಳ್ಳಿಯಲ್ಲಿ ಇದ್ದೇನೆ. ನನ್ನ ತಾಯಿಯನ್ನು ಒಡೆಯರೆಹೊಸಹಳ್ಳಿ ಗ್ರಾಮದಿಂದ ದಲ್ಲಾಳು ಗ್ರಾಮಕ್ಕೆ ವೆಂಕಟೇಶ್ ರವರಿಗೆ ಮದುವೆ ಮಾಡಿಕೊಟ್ಟ ಕಾರಣ ನಾನು, ನನ್ನ ತಾಯಿ ಎಲ್ಲರೂ ದಲ್ಲಾಳು ಗ್ರಾಮದಲ್ಲಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ, ನಾವು ಒಡೆಯರಹೊಸಹಳ್ಳಿಯಲ್ಲಿ ವಾಸವಾಗಿದ್ದೇವೆ. ನಾನು ಒಡೆಯರಹೊಸಹಳ್ಳಿಯಲ್ಲಿ ವಾಸವಾಗಿದ್ದೇನೆ ಎಂಬ ಬಗ್ಗೆ ಏನೇನು ದಾಖಲೆ ಕೊಟ್ಟಿದ್ದೇನೆ ಎಂದರೆ ದಾಖಲೆ ಇದೆ ನನಗೆ ಹೇಳಿಲ್ಲ ಆದ್ದರಿಂದ ನಾನು ಕೊಟ್ಟಿಲ್ಲ. ಈ ಬಗ್ಗೆ ದಾಖಲೆ ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ.

ನನ್ನ ಅಜ್ಜಿ ಪುಟ್ಟಮ್ಮ ದಿಃ 16.10.2017 ರಲ್ಲಿ ಮರಣ ಹೊಂದಿದ್ದಾರೆ. ಅವರು ಮರಣ ಹೊಂದಿದಾಗ ಅವರಿಗೆ ಸುಮಾರು 75 ವರ್ಷ ವಯಸ್ಸಾಗಿತ್ತು. ನನ್ನ ತಾಯಿಗೆ ಸುಮಾರು 55 ವರ್ಷ ವಯಸ್ಸಾಗಿರಬಹುದು. ಅರ್ಜಿದಾರ ಚಂದ್ರೇಗೌಡರರು ನನ್ನ ಮೊದಲನೆ ಸೋದರ ಮಾವ ಆಗಿದ್ದಾರೆ. 2015 ರಲ್ಲಿ ಈ ಅರ್ಜಿ ಹಾಕುವ ಕಾಲಕ್ಕೆ ನನ್ನ ಮಾವ ಅರ್ಜಿದಾರರ ವಯಸ್ಸು 64 ವರ್ಷ ಆಗಿತ್ತು ಎಂದರೆ ಇರಬಹುದು. ಹಾಗಾದರೆ ಪ್ರಸ್ತುತ ಅರ್ಜಿದಾರಿಗೆ ಸುಮಾರು 71 ವರ್ಷ ವಯಸ್ಸಾಗಿದೆ ಎಂದರೆ ಇರಬಹುದು. ನನ್ನ ಅಜ್ಜಿ ಮರಣ ಹೊಂದಿದಾಗ ಅವರಿಗೆ ಸುಮಾರು 90 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ, ನನ್ನ ಪ್ರಕಾರ ಅವರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ನನ್ನ ಇನ್ನೊಬ್ಬ ಸೋದರ ಮಾವ 2 ನೇ ಎದುರುದಾರರಿಗೆ ಈಗ ಸುಮಾರು 70 ರಿಂದ 75 ವರ್ಷ ವಯಸ್ಸಾಗಿರಬಹುದು. ನನ್ನ ತಾಯಿಗೂ ಮತ್ತು 2 ನೇ ಎದುರುದಾರರಿಗೂ ಸುಮಾರು 20 ವರ್ಷ ವಯಸ್ಸಿನ ಅಂತರ ಇದೆ ಎಂದರೆ ಸರಿಯಲ್ಲ. ನನ್ನ ಸೋದರ ಮಾವನಾದ 2 ನೇ ಎದುರುದಾರರು ಹುಟ್ಟಿಧಾರಾಭ್ಯ ಅಂಗವಿಕಲರಾಗಿದ್ದಾರೆ ಎಂದು ನನ್ನ ತಾತ ನನ್ನ ಅಜ್ಜಿ ಮಾತನಾಡುವುದನ್ನು ನಾನು ಕೇಳಿದ್ದೇನೆ ಆದರೆ ನಿಜ ಸಂಗತಿ ನನಗೆ ಗೊತ್ತಿಲ್ಲ. ನನ್ನ ಈ ಸೋದರ ಮಾವ ಈಗಲೂ ಜೀವಂತವಿದ್ದಾರೆ. ಯಾವ ರೀತಿಯ ಅಂಗವಿಕಲತೆ ಎಂದರೆ ಅವರು ಕೈ ಕಾಲುಗಳನ್ನು ಎಳೆದು ಹಾಕುತ್ತಾರೆ, ಎಡದ ಕೈ ಮಾತ್ರ ಸ್ವಲ್ಪ ಸ್ವಾಧೀನದಲ್ಲಿದೆ ಅದರಲ್ಲಿ ಊಟ ಮಾಡುತ್ತಾರೆ ಇನ್ನೂ ಉಳಿಕೆ ಎರಡು ಕಾಲು ಮತ್ತು ಬಲಗೈ ಸ್ವಾಧೀನದಲ್ಲಿರುವುದಿಲ್ಲ. 2 ನೇ ಎದುರುದಾರರನ್ನು ಶಾಲೆಗೆ ಕಳುಹಿಸಿರಲಿಲ್ಲ. ಅವರಿಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಮಾತನಾಡಲು ಕೂಡ ಬರುವುದಿಲ್ಲ ಎಂದರೆ ಅರ್ಥ ಮಾಡಿಕೊಳ್ಳುತ್ತಾರೆ ಆದರೆ ಸನ್ನೆ ಮೂಲಕ ಉತ್ತರಿಸುತ್ತಾರೆ. ಅವರಿಗೆ ಮಾತನಾಡಲು ಬರುವುದಿಲ್ಲ ಎಂದರೆ ಸ್ವಲ್ಪ ಸ್ವಲ್ಪ ಸನ್ನೆ ಮೂಲಕ ಮಾತನಾಡುತ್ತಾರೆ. ಅವರ ಬುದ್ದಿ ಕೂಡ ಸ್ಥಿಮಿತದಲ್ಲಿ ಇಲ್ಲ ಎಂದರೆ ಸರಿಯಲ್ಲ, ನಮ್ಮನ್ನು ಅವರ ಅಣ್ಣ-ತಮ್ಮಂದಿರನ್ನು ಗುರುತಿಸುತ್ತಾರೆ. ಅವರಿಗೆ ಪ್ರಾಪಂಚಿಕ ಜ್ಞಾನ ಇಲ್ಲ ಎಂದರೆ ಸರಿ ಎಂದು ನುಡಿದು ಅವರು

ಹೊರಗಡೆ ಎಲ್ಲೂ ಹೋಗಿಲ್ಲ, ಆಸ್ಪತ್ರೆ, ಅಲ್ಲಿ ಇಲ್ಲಿಗೆ ನಾವೆ ಕರೆದುಕೊಂಡು ಹೋಗುತ್ತೇವೆ ಎನ್ನುತ್ತಾರೆ.

ಈ ಅರ್ಜಿ ಸಲ್ಲಿಸಿರುವ ಮುಂಚೆ ಬೇರೆ ಯಾವುದಾದರೂ ಕೇಸು ನಡೆದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಅರ್ಜಿಯೂ ಅಂತಿಮ ಡಿಕ್ರಿಗಾಗಿ ಇದ್ದೂ ಇದಕ್ಕೂ ಪೂರ್ವದಲ್ಲಿ ನನ್ನ ಮೂರು ಜನ ಸೋದರ ಮಾಂವದಿರು ನನ್ನ ಅಜ್ಜ, ಅಜ್ಜಿ, ನನ್ನ ತಾಯಿ ಮತ್ತು 2 ನೇ ಎದುರುದಾರರಾದ ಪರಮೇಶಗೌಡರ ರವರ ವಿರುದ್ದ ಪ್ರಾಥಮಿಕ ಡಿಕ್ರಿ ಕೋರಿ ಓ.ಎಸ್. 9/2008 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ಅಸಲು ದಾವೆ ನಡೆಯುವಾಗ ನನ್ನ ತಾತ ಬಸವೇಗೌಡರು ಮರಣ ಹೊಂದಿದ ನಂತರ ನನ್ನ ಅಜ್ಜಿ ಪುಟ್ಟಮ್ಮನವರನ್ನು ನ್ಯಾಯಾಲಯಕ್ಕೆ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಲಾಯಿತು ಎಂದರೆ ಸರಿ. ಸದರಿ ದಾವಾದಲ್ಲಿ ನನ್ನ ತಾಯಿ ಜಯಮ್ಮನವರು ಆಸ್ತಿಯಲ್ಲಿ ಭಾಗ ಕೇಳಿಲ್ಲ ಮತ್ತು ಅವರ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ.

ದಿಃ09.03.2015 ರಂದು ನನ್ನ ಅಜ್ಜಿ ಮತ್ತು ನನ್ನ ಸೋದರ ಮಾವ ಪರಮೇಶ ಗೌಡರವರು ನನಗೆ ವಿಲ್ ಮಾಡಿಕೊಟ್ಟಿದ್ದಾರೆ. ವಿಲ್ ಮಾಡಿದ್ದಾರೆ ಎಂದು ಹೇಳಿದ ಕಾಲಕ್ಕೆ ನನ್ನ ಅಜ್ಜಿಗೆ 90 ವರ್ಷ ವಯಸ್ಸಾಗಿತ್ತು ಅವರಿಗೆ ಕಣ್ಣು ಕಾಣುತ್ತಿರಲಿಲ್ಲ ಮತ್ತು ಕಿವಿ ಕೇಳುತ್ತಿರಲಿಲ್ಲ ಮತ್ತು ಪ್ರಾಪಂಚಿಕ ವ್ಯವಹಾರ ಕೂಡ ತಿಳಿಯುತ್ತಿರಲಿಲ್ಲ. ಅದೆ ರೀತಿ ನನ್ನ ಮಾವ ಪರಮೇಶಗೌಡರಿಗೆ ಅವರು ಹುಟ್ಟಿಧಾರಾಭ್ಯ ಕೈ ಕಾಲು ಬುದ್ದಿ ಮತ್ತು ಸ್ವಾಧೀನದಲ್ಲಿ ಇಲ್ಲದೆ ಅವರು ಸಂಪೂರ್ಣ ಅಂಗವಿಕಲರಾಗಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜಿ ಮತ್ತು ನನ್ನ ಮಾವ ಅವರ ಪಾಲಿಗೆ ಬಂದಿದ್ದಂತಹಜ ಆಸ್ತಿಗಳನ್ನು ನನಗೆ ವಿಲ್ ಮಾಡಿ ಕೊಟ್ಟಿದ್ದಾರೆ. ನನ್ನ ಅಜ್ಜಿ ಮತ್ತು ನನ್ನ ಮಾವನಿಗೆ ನಾನು ಮೇಲೆ ಹೇಳಿದಂತಹ ಸರ್ವೆ ನಂ. ಸ್ವತ್ತುಗಳಲ್ಲಿ 6 ನೇ 1 ಭಾಗ ಇದೆ ಎಂದು ಈ ನ್ಯಾಯಾಲಯ ತೀರ್ಮಾಣ ಮಾಡಿದ್ದರು ಅವರ ಸದರಿ ಭಾಗಾಂಶವನ್ನು ನನಗೆ ವಿಲ್ ಮಾಡಿ ಕೊಟ್ಟಿದ್ದಾರೆ.

ಯಾರಾದರೂ ಯಾವುದಾದರು ಅಸ್ತಿಗಳನ್ನು ವಿಲ್ ಅಥವಾ ವಿಲೆ ಮಾಡಬೇಕಾದರೆ ಅವರಿಗೆ ಸದರಿ ಆಸ್ತಿ ಮೇಲೆ ಸಂಪೂರ್ಣ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನ ಇರಬೇಕಾಗುತ್ತದೆ ಇಲ್ಲವಾದರೆ ಅವರಿಗೆ ಸದರಿ ಸ್ವತ್ತನ್ನು ವಿಲೆ ಮಾಡುವ ಹಕ್ಕು ಇರುವುದಿಲ್ಲ ಎಂದರೆ ಸರಿ. ನನ್ನ ಅಜ್ಜಿ ಮತ್ತು ನನ್ನ ಮಾವನಿಗೆ  ದಾವಾ ಸ್ವತ್ತುಗಳಲ್ಲಿ ಯಾವ ಚೆಕ್ಕುಬಂದಿಗೆ ಒಳಪಟ್ಟು ಯಾವ ಯಾವ ಸರ್ವೆ ನಂಬರ್ ಗಳಲ್ಲಿ  ಎಷ್ಟು  ವಿಸ್ತೀರ್ಣದ ಆಸ್ತಿ ಬರುತ್ತದೆ ಎಂದು ವಿಲ್ ಕಾಲಕ್ಕಾಗಲೆ ಅಥವಾ ಇವತ್ತಿಗೂ ಕೂಡ ಅವರಿಗೆ ಗೊತ್ತಿಲ್ಲ ಎಂದರೆ ಅವರಿಗೆ ಬಂದಿದ್ದ 1/6 ಭಾಗಕ್ಕೆ ವಿಲ್ ಮಾಡಿದ್ದಾರೆ ಎಂದರೆ ಸಾಕ್ಷಿ ನುಡಿಯುತ್ತಾರೆ.

ಓ.ಎಸ್. 9/2008 ರಲ್ಲಿ ಸುಮಾರು 9 ಎಕರೆ  ಜಮಿನಿಗೆ ನನ್ನ ಸೋದರ ಮಾವಂದಿರು ದಾವೆ ಹೂಡಿದ್ದರು. ವಿಲ್ ಮಾಡಿದ್ದಾರೆ ಎಂದು ಹೇಳಿದ ಸಮಯಕ್ಕೆ ನನ್ನ ಅಜ್ಜಿಗೆ ಅದಾಗಲೆ  ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿ ಕೇಳುತ್ತಿರಲಿಲ್ಲ ಮತ್ತು ನನ್ನ ಸೋದರ ಮಾವ ಪರಮೇಶ ಗೌಡರವರಿಗೆ ಪ್ರಾಪಂಚಿಕ ಜ್ಞಾನ ಇರಲಿಲ್ಲ ಅಂತಹ ಸಂದರ್ಭದಲ್ಲಿ ನಾನು ಅವರುಗಳನ್ನು ಸಬ್ ರಿಜಿಸ್ಟರ್ ಕಛೇರಿಗೆ ಕರೆದುಕೊಂಡು ಬಂದು ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿಕೊಂಡು ನಿಆರ್. 1 ರಂತೆ ಸುಳ್ಳು ದಾಖಲೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ, ಅವರು ಸ್ವಇಚ್ಚೆಯಿಂದಲೆ ಕಣ್ಣು, ಕಿವಿ ಸುಸ್ಥಿತಿಯಲ್ಲಿಟ್ಟುಕೊಂಡೆ ವಿಲ್ ಮಾಡಿದ್ದಾರೆ ಎಂದು ಸಾಕ್ಷಿ ಸ್ವಯಂ ನುಡಿಯುತ್ತಾರೆ. ನನ್ನ ಸೋದರ ಮಾವ ಪರಮೇಶ ಗೌಡರವನನ್ನು ನನ್ನ ಮಾವ ಮಲ್ಲೇಶ್ ಗೌಡರೆ ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು ಮೊದಲಿನಿಂದಲೂ  ನಾನೆ ನೋಡಿಕೊಳ್ಳುತ್ತಿದ್ದೇನೆ. ಅದೆ ರೀತಿ ಅಜ್ಜಿ ಪುಟ್ಟಮ್ಮ ರವರನ್ನು ಮಲ್ಲೇಶ್ ಗೌಡರೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ ನಾನೆ ನೋಡಿಕೊಳ್ಳುತ್ತಿದ್ದೆ. ನನ್ನ ಅಜ್ಜಿ ಮತ್ತು ನನ್ನ ಮಾವನನ್ನು ಮಲ್ಲೇಶ್ ಗೌಡರೆ ನೋಡಿಕೊಳ್ಳತ್ತಿದ್ದರೂ ಕೂಡ 2015 ರಲ್ಲಿ ನಾನು ಅವರುಗಳನ್ನು ಪುಸಲಾಯಿಸಿ ನಮ್ಮ ಮನೆಗೆ ಕರೆದುಕೊಂಡು ಹೋಗಿ ಮೋಸದಿಂದ ವಿಲ್ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅವರನ್ನು ನಾನೆ ನೋಡಿಕೊಳ್ಳುತಿದ್ದೆ.

ಪಾಟೀ ಸವಾಲು ಎದುರುದಾರ 4 ಎ ಇಂದ ಸಿ ಮತ್ತು 5 ರವರ ಪರ ಶ್ರೀ ಎಂ.ಆರ್.ಎಲ್. ವಕೀಲರಿಂದಃ-

ಮೇಲ್ಕಂಡಂತೆ ಅರ್ಜಿದಾರರ ಪರ ಮಾಡಿರುವ ಪಾಟೀ ಸವಾಲನ್ನು ಅನುಮೋದಿಸಿಕೊಂಡು ಮುಂದುವರೆದ ಪಾಟಿ ಸವಾಲುಃ-

ನನ್ನ ತಾಯಿಯ ಹೆಸರು ಜಯಮ್ಮ. ನನ್ನ ತಾಯಿಯನ್ನು ದಲ್ಲಾಳು ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದರು. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ 65 ವರ್ಷ ದಾಟಿದ ನಂತರ ಕಿವಿ ಸರಿಯಾಗಿ ಕೇಳಿಸುವುದಿಲ್ಲ, ಕಣ್ಣು ಸರಿಯಾಗಿ ಕಾಣಿಸುವುದಿಲ್ಲ, ಮತ್ತು ಬುದ್ದಿ ಕೂಡ ಸ್ಥಿಮಿತದಲ್ಲಿ ಇರುವುದಿಲ್ಲ ಅರಳು-ಮರಳು ಎನ್ನುವಂತೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಪುಟ್ಟಮ್ಮನವರು ಈ ಪ್ರಕರಣದಲ್ಲಿ ಎಷ್ಟು ಬಾರಿ ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ ಎಂದು ಹೇಳಲಾಗುವುದಿಲ್ಲ ಆದರೆ ಅವರು ನ್ಯಾಯಾಲಯಕ್ಕೆ ಬರುತ್ತಿದ್ದರು. ಅವರು ಕೊನೆಯ ಬಾರಿ ನ್ಯಾಯಾಲಯಕ್ಕೆ ಯಾವಾಗ ಬಂದಿದ್ದರು ನಿಖರವಾಗಿ ಹೇಳಲಾಗುವುದಿಲ್ಲ. ಎಷ್ಟು ವರ್ಷಗಳ ಹಿಂದೆ ಬಂದಿದ್ದರು ಎಂದು ಕೂಡ ಹೇಳಲಾಗುವುದಿಲ್ಲ ಎಕೆಂದರೆ ಅವರನ್ನು ನನ್ನ ತಾಯಿ ಕರೆತರುತ್ತಿದ್ದರು ಆಗ ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ನನ್ನ ಮದುವೆಗೂ ಮುಂಚೆ ಸುಮಾರು 6 ವರ್ಷಗಳ ಕಾಲ ಬೆಂಗಳೂರಿನಲ್ಲಿ ಕೆಲಸ ಮಾಡಿದ್ದೇನೆ.ನನ್ನ ಮದುವೆ ಯಾವ ವರ್ಷದಲ್ಲಿ ಆಗಿದೆ ಎಂದು ನಿಖರವಾಗಿ ಗೊತ್ತಿಲ್ಲ ಆದರೆ ಮದುವೆ ಆಗಿ 9 ವರ್ಷವಾಗಿದೆ. ನನ್ನ ಮಾವ ಪರಮೇಶ್ ಗೌಡರವರಿಗೆ ಮಾತನಾಡಲು ಬರುತ್ತಿರಲಿಲ್ಲ ಮತ್ತು ನಡೆಯಲು ಕೂಡ ಆಗುತ್ತಿರಲಿಲ್ಲ ನೆಲದಲ್ಲಿ ತೆವಳುತ್ತಿದ್ದರು ಎಂದರೆ ಇದಕ್ಕೆ ಈಗಾಗಲೆ ಉತ್ತರಿಸಿದ್ದೇನೆ. ಈ ರೀತಿ ಅವರಿಗೆ ನಡೆಯಲು ಆಗುತ್ತಿರಲಿಲ್ಲವಾದ ಕಾರಣ ಅವರು ಹೊರಗಡೆ ಹೋಗಬೇಕು ಎಂದರೆ ಇನ್ನೊಬ್ಬರ ಸಹಾಯ ಬೇಕಾಗುತ್ತಿತ್ತು ಎಂದರ ವೀಲ್ ಚೇರ್ ನಲ್ಲಿ ಹೋಗುತ್ತಿದ್ದರು. ಅವರು ಹೆಚ್ಚು ಹೊರಗೆ ಹೋಗುತ್ತಿರಲಿಲ್ಲ ಹುಷಾರಿಲ್ಲದಾಗ ಆಸ್ಪತ್ರೆಗೆ ಹೋಗುತ್ತಿದ್ದರು ಅವರನ್ನು ನಾನು ಮತ್ತು ನನ್ನ ಅಮ್ಮ ಕರೆದುಕೊಂಡು ಹೋಗುತ್ತಿದ್ದರು. ನನ್ನ ಅಜ್ಜಿಗೆ ಸಾಕಷ್ಟು ವಯಸ್ಸಾಗಿದ್ದ ಕಾರಣ ಅವರು ಸ್ವತಂತ್ರ್ಯವಾಗಿ ಓಡಾಡುತ್ತಿರಲಿಲ್ಲ ಯಾರಾದರೊಬ್ಬರ ಸಹಾಯ ಬೇಕಾಗಿತ್ತು ಎಂದರೆ ಸರಿಯಲ್ಲ. ನನ್ನ ಅಜ್ಜಿ ಮತ್ತು ಮಾವ

ಅಕ್ಕ-ಪಕ್ಕದವರು ಮತ್ತು ಸಂಬಂಧಿಕರೊಂದಿಗೆ ಒಡನಾಟ ಹೊಂದಿದ್ದರು. ನಮ್ಮ ಅಜ್ಜಿ ಎಲ್ಲಿಗಾದರೂ ಹೋಗಬೇಕಾದರೆ ಅವರೆ ಸ್ವತಂತ್ರ್ಯವಾಗಿ ಹೋಗಿ ಬರುತ್ತಿದ್ದರು. ವಿಲ್ ಬರೆದ ದಿನದಂದು ನನ್ನ ಅಜ್ಜಿ ಮತ್ತು ಮಾವ ನನ್ನನ್ನು ಕರೆದ ಕಾರಣ ಅವರೊಂದಿಗೆ ನಾನು ಸಬ್ ರಿಜಿಸ್ಟರ್ ಕಛೇರಿಗೆ ನಾನೆ ಹೋಗಿದ್ದೆ. ಆ ದಿನ ನಾವಲ್ಲದೆ ಸಬ್ ರಿಜಿಸ್ಟರ್ ಕಛೇರಿಗೆ ನನ್ನ ತಾಯಿ, ನನ್ನ ಅಜ್ಜಿ, ನನ್ನ ಮಾವ ಮತ್ತು ವಕೀಲರಾದ ದಿನೇಶ್ ಸರ್ (ಸಿಡಿ ವಕೀಲರು), ಮತ್ತು ಸಾಕ್ಷಿದಾರರಾದ ಅವಿನಾಶ್ ರವರು ಬಂದಿದ್ದರು. ವಿಲ್ ಮಾಡಬೇಕು ನನ್ನ ಅಜ್ಜಿ 1 ವಾರ ಮುಂಚೆಯೆ ನಾನು ನಮ್ಮ ಅಮ್ಮ ಮನೆಯಲ್ಲಿ ಇದ್ದಾಗ ಹೇಳಿದ್ದರು. ಆ ರೀತಿ ಹೇಳಿದ ನಿಖರವಾದ ದಿನಾಂಕ, ತಿಂಗಳು, ವರ್ಷ ನನಗೆ ಹೇಳಲಾಗುವುದಿಲ್ಲ, ನೆನಪಿಲ್ಲ. ನಾವು ಆ ದಿನ ಸಬ್ ರಿಜಿಸ್ಟರ್ ಕಛೇರಿಗೆ ನಮ್ಮ ಊರಾದ ಒಡೆಯರಹೊಸಹಳ್ಳಿಯಿಂದ ಬಂದಿದ್ದೇವು. ನಾವು ಆ ದಿನ ಊರನ್ನು 8 ಗಂಟೆಗೆ ಒಂದು ಆಟೋದಲ್ಲಿ ಬಿಟ್ಟಿದ್ದೇವು ಅದು ಯಾವ ಊರಿನ ಆಟೋ ಎಂದು ಗೊತ್ತಿಲ್ಲ, ಅಲ್ಲಿ ಹೋಗುತ್ತಿದ್ದ ಆಟೋವನ್ನು ಕೂಗಿ ಕರೆದು ಹೋಗಿದ್ದೆವು. ಅದು ಪ್ರಯಾಣಿಕರ ಆಟೋ ಆಗಿತ್ತು. ಪುನಃ ವಾಪಸ್ಸು ಹೋಗುವಾಗ ಅದೆ ಆಟೋದಲ್ಲಿ ಹೋಗಲಿಲ್ಲ, ಬೇರೆ ಆಟೋದಲ್ಲಿ ಹೋದೆವು. ನಾವು ಅಂದು ಆಟೋದಲ್ಲಿ ನೇರವಾಗಿ ಸಬ್ ರಿಜಿಸ್ಟರ್ ಕಛೇರಿಗೆ ಹೋಗಲಿಲ್ಲ ದಿನೇಶ್ ವಕೀಲರಲ್ಲಿ ಹೋಗಿ ಎಲ್ಲವನ್ನು ತಯಾರಿಸಿಕೊಂಡು ಆ ನಂತರ ಹೋದೆವು. ನಾವು ವಕೀಲರ ಕಛೇರಿಗೆ ಎಷ್ಟು ಗಂಟೆಗೆ ತಲುಪಿದೆವು ಎಂದು ನೆನಪಿಲ್ಲ. ವಕೀಲರ ಕಛೇರಿಯಲ್ಲಿ ನಮ್ಮ ಅಜ್ಜಿ ಮತ್ತು ನಮ್ಮ ಮಾವ ಇಬ್ಬರು ಈ ವಿಲ್ ಮಾಡಬೇಕು ಎಂದು ಮಾತುಕತೆ ಆಡಿದ್ದರು. ಆ ದಿನ ಯಾವ ವಾರ ಆಗಿತ್ತು ಎಂದು ಗೊತ್ತಿಲ್ಲ ದಿನಾಂಕ ಹೇಳಬಲ್ಲೆ. ವಕೀಲರ ಮುಂದೆ ಅಂದು ನಮ್ಮ ಅಜ್ಜಿ ಮತ್ತು ಮಾವನ ಆಧಾರ್ ಕಾರ್ಡ ಹಾಜರು ಪಡಿಸಿದ್ದರು. ವಿಲ್ ಮಾಡಲು ಏನೇನು ದಾಖಲೆ ಬೇಕು ಎಂದು ಕೇಳಿದ್ದರೊ ಅವೆಲ್ಲವನ್ನು ನಮ್ಮ ಅಜ್ಜಿಯೆ ಕೊಟ್ಟಿದ್ದರು ನಾನು ಆಧಾರ್ ಕಾರ್ಡ ಮಾತ್ರ ನೋಡಿದ್ದೆ. ಇನ್ನೇನು ದಾಖಲಾತಿ ಕೊಟ್ಟಿದ್ದರು ಎಂದು ನಾನು ನೋಡಲಿಲ್ಲ ಎಂದರೆ ಸರಿ. ಅಂದು ದಿನೇಶ್ ವಕೀಲರ ಕಛೇರಿಯಲ್ಲಿ ಸುಮಾರು ಅರ್ಧ ಗಂಟೆ ಕಾಲ ಮಾತುಕತೆ ಆಯಿತು. ಈ ರೀತಿ ದಾಖಲೆಗಳನ್ನೆಲ್ಲಾ ತಯಾರಿಸಿಕೊಳ್ಳುವರೆಗೆ ನಾನು ವಕೀಲರ

ಕಛೇರಿಯಲ್ಲಿಯೆ ಇದ್ದೆ. ಆ ಸಮಯದಲ್ಲಿ ನಾನು, ನಮ್ಮ ತಾಯಿ, ನಮ್ಮ ಅಜ್ಜಿ, ನಮ್ಮ ಮಾವ ಮತ್ತು ದಿನೇಶ್ ವಕೀಲರು, ಮತ್ತು ಅವಿನಾಶ್ ರವರು ಮಾತ್ರ ಇದ್ದೆವು. ಆ ದಿನ ಅವಿನಾಶ್ ರವರು ನಮ್ಮ ಜೊತಯಲ್ಲಿಯೆ ಬಂದಿದ್ದರು.ಪುನಃ ನುಡಿಯತ್ತಾರೆ ನಾವು ವಕೀಲರ ಕಛೇರಿಗೆ ಹೋದ 10 ನಿಮಿಷ ಆದ ಮೇಲೆ ಬಂದಿದ್ದರು ನಂತರ ನಮ್ಮ ಜೊತೆ ಸಬ್ ರಿಜಿಸ್ಟರ್ ಕಛೆರಿಗೆ ಬಂದಿದ್ದರು. ಅವಿನಾಶ್ ರವರನ್ನು ವಕೀಲರ ಕಛೇರಿಗೆ ಬರಲು ಯಾರು ತಿಳಿಸಿದ್ದರು ಎಂದು ಅವಿನಾಶ್ ರವರು ವಕೀಲರ ಜೊತೆ ಅಲ್ಲಿಯೆ ಕೆಲಸ ಮಾಡುತ್ತಿದ್ದರು ಆದ್ದರಿಂದ ದಿನೇಶ್ ಸರ್ ರವರೆ ಅವರನ್ನು ಕರೆದಿದ್ದರು. ದಿನೇಶ್ ವಕೀಲರಿಗೆ 1 ವಾರ ಮುಂಚೆಯೆ ವಿಲ್ ವಿಚಾರವನ್ನು ನಮ್ಮ ಅಜ್ಜಿ ತಿಳಿಸಿದ್ದರು. ಅವರು ನ್ಯಾಯಾಲಯಕ್ಕೆ ಪ್ರಕರಣಕ್ಕೆಂದು ಬಂದಿದ್ದ ದಿನ ತಿಳಿಸಿ ಹೋಗಿದ್ದರು. ವಕೀಲರು ದಾಖಲೆಯನ್ನು ನನ್ನ ಅಜ್ಜಿ ಮತ್ತು ಮಾವ ಅವರ ಕಛೇರಿಗೆ ಹೋದ ನಂತರ ತಯಾರಿಸಿದರು. ನಾವು ವಕೀಲರ ಕಛೇರಿಯಿಂದ ಸಬ್ ರಿಜಿಸ್ಟರ್ ಕಛೇರಿಗೆ ಎಷ್ಟು ಗಂಟೆಗೆ ಹೋದೆವು ಎಂದು ಗೊತ್ತಿಲ್ಲ. ವಕೀಲರ ಕಛೇರಿಯಿಂದ ಸಬರ್ ರಿಜಿಸ್ಟರ್ ಕಛೇಗೆ ಮಾಮೂಲಿ ಒಂದು ಆಟೋದಲ್ಲಿ ಹೋದೆವು ವಕೀಲರು ಅವರ ವಹಿಕಲ್ಸ್ ನಲ್ಲಿ ಬಂದಿದ್ದರು.

ಎಷ್ಟು ಐಟಂ ಸ್ವತ್ತುಗಳಿಗೆ ವಿಲ್ ಬರೆದರು ಎಂದರೆ ಸಾಕ್ಷಿ ಅವರ 1/6 ನೇ ಭಾಗಕ್ಕೆ ಬರೆದರು ಎನ್ನುತ್ತಾರೆ. 1/6 ಭಾಗಕ್ಕೆ ಚೆಕ್ಕುಬಂದಿ ನಮೂದಿಸಿ ವಿಲ್ ಬರೆದಿದ್ದರು. ಚಕ್ಕುಬಂದಿಯನ್ನು ಯಾರು ಹೇಳಿದರು ಎಂದರೆ ಎಂ.ಆರ್.ನಲ್ಲಿ ಇದ್ದ ಚಕ್ಕುಬಂದಿಯನ್ನು ನಾನೆ ಹೇಳಿದ್ದೆ ಎನ್ನುತ್ತಾರೆ. ನಾನು ಹೇಳಿದ ಚಕ್ಕುಬಂದಿಯನ್ನು ಬರೆದುಕೊಂಡರಾ ಅಥವಾ ಟೈಪ್ ಮಾಡಿಕೊಂಡರಾ ಎಂದರೆ ಬರೆದುಕೊಂಡರು. ನಾನು ಎಂ.ಆರ್. ನೋಡಿ ಚಕ್ಕುಬಂದಿ ಹೇಳಿದೆ ಎಂದು ನುಡಿದಿದ್ದು, ಸದರಿ ಎಂ.ಆರ್. ದಾಖಲೆಯನ್ನು ವಕೀಲರಿಗೆ ನೀಡಿದ್ದರು. ನಾನು ಎಂ.ಆರ್. ನೋಡಿಕೊಂಡು ಚಕ್ಕುಬಂದಿ ಹೇಳಿದ್ದೆ ಎಂದು ಹೇಳಿರುವ ಎಂ.ಆರ್. ಅನ್ನು ಇಲ್ಲಿ ಹಾಜರು ಪಡಿಸಿಲ್ಲ. ಅಲ್ಲಿ ಮತ್ತೆ ಇನ್ನಾವ ದಾಖಲೆಯನ್ನು ನೋಡಲಿಲ್ಲ. ಸ್ವತ್ತುಗಳ ಆರ್.ಟಿ.ಸಿ ಯು ಆ ಸಮಯದಲ್ಲಿ ನನ್ನ ತಾತ ಬಸವೇಗೌಡರ

ಹೆಸರನಲ್ಲಿ ಇತ್ತು. ವಿಲ್ ಬರೆಸುವಾಗ ನಮ್ಮ ತಾತ ಬದುಕಿರಲಿಲ್ಲ. ವಿಲ್ ಪತ್ರಕ್ಕೆ ಮೊದಲಿಗೆ ನಮ್ಮ ಅಜ್ಜಿ ಹೆಬ್ಬೆಟ್ಟು ಒತ್ತಿದ್ದರು, ಆನಂತರ ನಮ್ಮ ಮಾವ ಪರಮೇಶ್ ಗೌಡರ ಹೆಬ್ಬೆಟ್ಟಿನ ಸಹಿ ಒತ್ತಿದ್ದರು, ಆನಂತರ ಸಾಕ್ಷಿದಾರರಾದ ಚಲುವಯ್ಯ ಮತ್ತು ಅವಿನಾಶ್ ರವರು ಸಹಿ ಮಾಡಿದ್ದರು. ಈ ಎಲ್ಲಾ ಸಹಿಗಳನ್ನು ತಾಲ್ಲೂಕು ಕಛೇರಿಯಲ್ಲಿಯೆ ಮಾಡಿದರು. ನಾನು ಹೇಳಿದಂತಹ ಸಾಕ್ಷಿದಾರರಾದ ಚಲುವಯ್ಯನವರು ಅವರು ಅಲ್ಲಿಯೆ ತಾಲ್ಲೂಕು ಆಫೀಸು ಹತ್ತಿರ ಇದ್ದರು. ಅವರು ತಲ್ಲೂಕು ಆಫೀಸಿಗೆ ಏಕೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಅವರನ್ನು ನಾನೆ ಕರೆದು ಸಹಿ ಮಾಡಿಸಿದ್ದೆ. ಚಲುವಯ್ಯ ನವರು ಬನ್ನಿಕುಪ್ಪೆ ಗ್ರಾಮದವರು. ಅವರು ತಂದೆಯ ಹೆಸರು ನನಗೆ ಗೊತ್ತಿಲ್ಲ. ಅವರು ನನಗೆ ಸುಮಾರು ವರ್ಷಗಳಿಂದ ಅಂದರೆ ಈ ಕೇಸಿಗೆ ಬರುತ್ತಿದ್ದ ಸಮಯದಿಂದ ಪರಿಚಯ ಇದ್ದರು. ನಾನು ಈ ಕೇಸಿಗೆ ಸುಮಾರು ಬಾರಿ ಬಂದಿದ್ದೇನೆ. ರಜೆಗೆ ಊರಿಗೆ ಬಂದಾಗ ಹಿಯರಿಂಗ್ ದಿನಾಂಕ ಬಿದ್ದಾಗಲೆಲ್ಲಾ ಬಂದಿದ್ದೇನೆ.

ಚಲುವಯ್ಯ ನಮ್ಮ ಸಂಬಂಧಿಕರು ಅಲ್ಲ, ಅವರು ನಮ್ಮ ಕುಲಸ್ಥರು ಅಲ್ಲ. ಅವರು ನನಗೆ ಹುಣಸೂರಿಗೆ ಬಂದಾಗ ಪರಿಚಯವಾಗಿದ್ದರು ಆದರೆ ಎಲ್ಲಿ ಯಾವಾಗ ಎಂದು ಹೇಳಲಾಗುವುದಿಲ್ಲ. ಈ ಚಲುವಯ್ಯ ನ್ಯಾಯಾಲಯಕ್ಕೆ ನಿರಂತರವಾಗಿ ತಿರುಗಾಡುವ (ಕೋರ್ಟ ಬರ್ಡ) ವ್ಯಕ್ತಿ ಆಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಚಲುವಯ್ಯ ರವರು ನ್ಯಾಯಾಲಯದಲ್ಲಿ ಇರುವ ಅನೇಕ ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿ ಪರ ಜಾಮೀನು ನೀಡಲು ಬರುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಈ ರೀತಿ ಜಾಮೀನು ನೀಡಬೇಕು ಎಂದರೆ, ಯಾವುದಾದರೂ ದಾಖಲೆಗೆ ಸಾಕ್ಷಿಯಾಗಿ ಸಹಿ ಮಾಡಬೇಕು ಎಂದರೆ ಹಣಕಾಸು ಪಡೆದುಕೊಂಡು ಈ ರೀತಿ ಜಾಮೀನು ಮತ್ತು ಸಹಿಗಳನ್ನು ಹಾಕುತ್ತಿದ್ದರು ಎಂದರೆ ನನಗೆ ಅದರ ವಿಚಾರ ಗೊತ್ತಿಲ್ಲ. ಚಲುವಯ್ಯ ನವರು ಜೀವಂತ ಇದ್ದಾರೆ ಎಂದರೆ ಸರಿ. ಈಗಲೂ ಅವರು ಹುಣಸೂರಿಗೆ ಬಂದು ಹೋಗಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಊರಿನಲ್ಲಿಯೆ ಇರುತ್ತಾರೆ ಅವರ ದೇಹ ಮತ್ತು ಕೈ ಈಗ ನಡುಗುತ್ತದೆ ಎನ್ನುತ್ತಾರೆ. ಅವರು ಈಗ ಮಾತನಾಡುತ್ತಾರೆ ಎಂದರೆ

ಮಾತನಾಡುತ್ತಾರೆ ಆದರೆ ಸ್ಪಷ್ಟವಾಗಿ ಮಾತನಾಡುವುದಿಲ್ಲ. ನಾನು ಇತ್ತೀಚಿಗೆ ಸ್ವಲ್ಪ ದಿನಗಳ ಹಿಂದೆ ಚಲುವಯ್ಯ ನವರನ್ನು ಭೇಟಿ ಮಾಡಿದ್ದೆ. ಅವರಿಗೆ ಕೈ ಕಾಲು ನಡುಗುವುದನ್ನು ಬಿಟ್ಟರೆ ಅವನ್ನು ಸಲೀಸಾಗಿ ಕರೆದುಕೊಂಡು ಬರಬಹುದು, ಕರೆದುಕೊಂಡು ಹೋಗಬಹುದು ಎಂದರೆ ನನಗೆ ಗೊತ್ತಿಲ್ಲ. ಚಲುವಯ್ಯ ಈಗಲೂ ಚೆನ್ನಾಗಿದ್ದಾರೆ ಹುಣಸೂರಿಗೆ ಬಂದು ಹೊಗುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಲುವಯ್ಯ ನವರು ಈಗಲೂ ಬರಲು ಶಕ್ತರಾಗಿದ್ದಾರೆ ಆದರೆ ನಿಆರ್. 1 ರ ವಿಲ್ ನ್ನು ನಾನು ಸೃಷ್ಟಿ ಮಾಡಿಕೊಂಡಿರುವ ಕಾರಣ ಅವರಿಗೆ ಬರಲು ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರನ್ನು ಸಾಕ್ಷಿಯಾಗಿ ನ್ಯಾಯಾಲಯಕ್ಕೆ ಕರೆ ತಂದರೆ ನಿಜಾಂಶ ತಿಳಿಯುತ್ತದೆ ಎಂದೆ ಅವರು ಬರಲು ಆಗುವುದಿಲ್ಲ ಎಂದು ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಅವರ ಕೈ ಕಾಲು ನಡಗುತ್ತದೆ ಮತ್ತು ಸೃಷ್ಟವಾಗಿ ಮಾತನಾಡಲು ಆಗುತ್ತಿಲ್ಲ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ವಕೀಲರಿಗೆ ವಿಚಾರವನ್ನು ನಮ್ಮ ಮಾವ ಪರಮೇಶ್ ರವರೆ ಸನ್ನೆ ಮೂಲಕ ಹೇಳಿದರು. ಅವರು ವಕೀಲರಿಗೆ ಸನ್ನೆ ಮೂಲಕ ವಿಚಾರ ತಿಳಿಸುವಾಗ ನಾನು ನಮ್ಮ ಅಜ್ಜಿ, ನಮ್ಮ ಮಾವ ಪರಮೇಶ್ ಗೌಡ ಮತ್ತು ನಮ್ಮ ಅಮ್ಮ ಇದ್ದೇವು. ನನ್ನ ಮಾವ ಸನ್ನೆ ಮೂಲಕ ವಿಚಾರ ತಿಳಿಸಿದರೆ ವಕೀಲರಿಗೆ ಅರ್ಥ ಆಗುವುದಿಲ್ಲ ಎಂದರೆ ಸರಿಯಲ್ಲ.

ವಿಲ್ ಗೆ ಸಹಿಗಳನ್ನು ರಿಜಿಸ್ಟರ್ ಗೂ ಮೊದಲೆ ಮಾಡಿದ್ದರಾ ಅಥವಾ ರಿಜಿಸ್ಟರ್ ಆದ ನಂತರ ಮಾಡಿದ್ದಾರಾ ಎಂದರೆ ಅಲ್ಲಿ ರಿಜಿಸ್ಟರ್ ಆಗುತ್ತಿರುವಾಗ ಎಲ್ಲರೂ ಅಲ್ಲಿಯೆ ಸಹಿ ಮಾಡಿದರು.ಎಂದು ನುಡಿದು ರಿಜಿಸ್ಟರ್ ಆದ ಮೇಲೆ ಅಲ್ಲವಾ ಸಹಿ ಮಾಡುವುದು ಎಂದು ಪುನಃ ನುಡಿಯುತ್ತಾರೆ. ರಿಜಿಸ್ಟರ್ ಆದ ನಬಂತರ ನನ್ನ ಅಜ್ಜಿ ಮತ್ತು ನಮ್ಮ ಮಾವ ಪರಮೇಶ್ ಗೌಡ ರವರು ಹೆಬ್ಬೆಟ್ಟು ಸಹಿ ಮಾಡಿದರು. ಸಾಕ್ಷಿದಾರರಾಗಿ ಚಲುವಯ್ಯ ಮತ್ತು ಅವಿನಾಶ್ ಸಹಿ ಮಾಡಿದರು. ಸಾಕ್ಷಿದಾರರ ವಿಳಾಸದ ಬಗ್ಗೆ ಏನೇನು ದಾಖಲೆ ಪಡೆದುಕೊಂಡರು ಎಂದರೆ ಅವರು ಆಧಾರ್ ಕಾರ್ಡ ಪಡೆದುಕೊಂಡಿದ್ದರು. ಅವಿನಾಶ್ ರವರು ಆಗ ನನ್ನ ಪರಿಚಯಸ್ಥರಾಗಿರಲಿಲ್ಲ. ಅವಿನಾಶ್ ರವರು ತಾಲ್ಲೂಕು ಆಫೀಸಿನಲ್ಲಿ

ಸಾಕ್ಷಿದಾರರಾಗಿ ಸಹಿ ಮಾಡಿದ್ದರು. ದಾಖಲೆ ಅವರು ಎಷ್ಟು ಕಡೆ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದೆ ರೀತಿ ಚಲುವಯ್ಯನವರು ಎಷ್ಟು ಕಡೆ ಸಹಿ ಮಾಡಿದ್ದಾರೆ ಎಂದು ನನಗೆ ಗೂತ್ತಿಲ್ಲ. ಆ ಸಮಯದಲ್ಲಿ ನನ್ನ ತಾಯಿ ಕೂಡ ಇದ್ದರು. ನನ್ನ ತಾಯಿಗೆ ಸಾಕ್ಷಿಯಾಗಿ ಸಹಿ ಮಾಡಲು ತೊಂದರೆ ಏನು ಇರಲಿಲ್ಲ ಎಂದರೆ ಸಾಕ್ಷಿಗೆ ಅವರು ಸಹಿ ಮಾಡಲಿಲ್ಲ ಎನ್ನುತ್ತಾರೆ. ಸಾಕ್ಷಿದಾರರಾಗಿ ನಮ್ಮ ಊರಿನವರು ಅಥವಾ ಸಂಬಂಧಿಕರನ್ನು ಕರೆ ತರಲು ತೊಂದರೆ ಇತ್ತಾ ಎಂದರೆ ಸಂಬಂಧಿಕರು ಕರೆದರೂ ಬರುವುದಿಲ್ಲ ಎನ್ನುತ್ತಾರೆ. ನಮ್ಮ ಅಜ್ಜಿಗೆ ವಿಲ್ ಮಾಡಬೇಕು ಉದ್ದೇಶದ ಇದ್ದಿದ್ದರೆ ಸಂಬಂಧಿಕರು ಮತ್ತು ನಮ್ಮ ಗ್ರಾಮಸ್ಥರು ಸಾಕ್ಷಿಯಾಗಿ ಸಹಿ ಮಾಡಲು ಬರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲಿಲ್ಲ ಆದ್ದರಿಂದ ಅವರು ಮನೆ ಬಿಟ್ಟು ಎಲ್ಲಿಯೂ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ವಿಲ್ ಮಾಡುವ ಉದ್ದೇಶ ಇದ್ದಿದ್ದರೆ ಅವರ ಮನೆಯ ಅಕ್ಕ ಪಕ್ಕದವನ್ನು ಸಂಬಂಧಿಕರನ್ನು ಅಥವಾ ಗ್ರಾಮಸ್ಥರನ್ನು ಕರೆತಂದು ಸಹಿ ಮಾಡಿಸುತ್ತಿದ್ದರು ಎಂದರೆ ನಮ್ಮ ಅಜ್ಜಿಗೆ ಸಾಕ್ಷಿ ಬೇಕು ಎಂಬುದು ಗೊತ್ತಿರಲಿಲ್ಲ ಎನ್ನುತ್ತಾರೆ. ನಾವು ಮೊಟ್ಟ ಮೊದಲು ಸಬ್ ರಿಜಿಸ್ಟ್ರರ್ ಕಛೇರಿಯಲ್ಲಿ ದಾಖಲೆ ತಯಾರು ಮಾಡುವವರ ಬಳಿ ಹೋದೆವು.

<u>ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.